ರೋಸಿಗೆ ಸಂಬಂಧಿಸಿದಂತೆ ಅವಳಿಗೆ ಗೊತ್ತಿಲ್ಲದ ಪರಮಸತ್ಯವೊಂದಿದೆ. ಅವಳ ಕುರೂಪ ಮನುಷ್ಯರ ಅಸಹನೆಯನ್ನು ಪಡೆಯುವುದರಲ್ಲಿ ಪ್ರಧಾನ ಪಾತ್ರವಹಿಸಿದೆ. ಒಂದು ಕೆಟ್ಟ ಬೂದುಬಣ್ಣ ರೋಸಿಯದು. ಅವಳ ಕಿವಿ ಬಾಗಿಕೊಂಡಿಲ್ಲ. ನರಿಯ ಮೂತಿಯಂತಿರುವ ನೀಳವಾದ ಮುಖ ಅವಳದು.

‘‘ಅಪಶಕುನ! ನೋಡಿದರೆ ಅಂದು ಅನ್ನ ಸಿಗಲಾರದು...’’ ಅಡುಗೆಯವನ ಅಭಿಪ್ರಾಯವದು. ಮನೆಯವರು ಅವಳನ್ನು ಬೈಯ್ಯುವುದಿದೆ. ಆಗೆಲ್ಲ, ‘ನಾನೇನು ತಪ್ಪು ಮಾಡಿದೆ’ ಎಂಬ ಭಾವದಿಂದ ನಿಲ್ಲುವುದು ಮಾತ್ರ ರೋಸಿಯ ಕೆಲಸ.

ಅಡುಗೆಯವ ಕನಿಕರ ತೋರಿದರೆ ರೋಸಿಗೆ ಒಂದು ಹಿಡಿ ಅನ್ನ ಸಿಕ್ಕಿತು. ಆದರೂ ಆ ವ್ಯಕ್ತಿಯೆಂದರೆ ರೋಸಿಗೆ ಭಯ. ಅಲುಗಾಡದೆ ಸೌದೆಕೊಟ್ಟಿಗೆಯಲ್ಲಿ ಮಲಗಿರುವಾಗ ಸೌದೆ ತೆಗೆಯಲು ಆತ ಬಂದಾಗ ಲೆಕ್ಕವಿಲ್ಲದಷ್ಟು ಏಟು ಕೊಡುವನು. ಆತ ಸೌದೆ ತೆಗೆಯಲು ಬರುವುದನ್ನು ನೋಡಿದರೆ ಅವಳು ಬೇಗನೆ ತಪ್ಪಿಸಿಕೊಳ್ಳುವುದು ರೂಢಿ.

ಮನೆಯ ಯಜಮಾನರ ಮುದ್ದಿನ ಮಗನ ಕಾರಣಕ್ಕೆ ರೋಸಿಯು ತಾಯಿಯೂ ಜಗಳವಾಡಬೇಕಾಯಿತು. ಅವನು ಕಂಗಿನ ಸಲಿಕೆಯಿಂದ ಮಾಡಿದ ಈಟಿ ಎಸೆತದ ಗುರಿ ಪರೀಕ್ಷಿಸಲು ಅವರು ಬೇಕು.

ಏನೇ ಆದರೂ ಒಂದು ದಿನ ಸಹನೆಯ ಪ್ರಾಕೃತ ಮೂರ್ತಿಯೇ ಆಗಿದ್ದ ರೋಸಿಯ ಅಮ್ಮನ ಸಹನೆಯ ಕಟ್ಟೆ ಒಡೆಯಿತು. ನಿದ್ದೆಯಲ್ಲಿದ್ದಾಗ ಕುಟ್ಟ ಅವಿತು ನಿಂತು ಹೊಡೆದ. ಅವಳು ಜಿಗಿದೆದ್ದು ಹುಡುಗನ ಮೇಲೇರಿ ಹೋದಳು. ಕುಟ್ಟ ಅಡುಗೆಕೋಣೆಗೆ ಓಡಿಹೋದ.

ಆ ಘಟನೆಯು ಅಲ್ಲಿ ಕೋಲಾಹಲವನ್ನೆಬ್ಬಿಸಿತು.

“ನಾಣು, ನೋಡು... ನಾಯಿ ಕಚ್ಚುವುದಕ್ಕೆ ಬಂತು...”

“ಯಾವ ನಾಯಿ? ತಾಯಿಯೋ? ಮರಿಯೋ?...”

“ತಾಯಿ ದರಿದ್ರ. ಅವನ್ನತ್ತ ಓಡಿಸಬೇಕು...” ಕುಟ್ಟ ತನ್ನ ತಾಯಿಯೊಡನೆ ತಂದೆಯೊಡನೆ ಎಲ್ಲರಲ್ಲೂ ಆ ವಿಷಯವನ್ನು ಹೇಳಿದ.

ಎಲ್ಲರೂ ಏಕಸ್ವರದಲ್ಲಿ ಅಭಿಪ್ರಾಯಪಟ್ಟರು.

“ಕಚ್ಚುವುದೋ! ಹಾಗಾದರೆ ಜೀವಂತ ಬಿಡಬಾರದು” ಘಟನೆಯನ್ನು ನೋಡುತ್ತ ನಿಂತಿದ್ದ ಕುಟ್ಟನ ತಂಗಿ ಹೇಳಿದಳು.

“ಅಮ್ಮಾ, ಕುಟ್ಟ ಹೊಡೆದದ್ದಕ್ಕೆ...”

ಕುಟ್ಟ ಸಹೋದರಿಯ ಮೇಲೇರಿ ಹೋದ.

“ನೀನು ಹೋಗೆಲೇ, ಹೊಡೆದರೆ ಕಚ್ಚಬೇಕೆಂದಿದೆಯೇ.”

ಕುಟ್ಟ ಮತ್ತು ಅಡುಗೆಯವ ಒಂದು ‘ಬೇಟೆ’ಗೆ ಮುಂದಾದರು. ಸ್ವಲ್ಪ ಮೊದಲು ಆದ ಅನುಭವದಿಂದ ನಾಯಿಯ ಭಯವಿತ್ತು. ದೊಡ್ಡ ಬಡಿಗೆ ತೆಗೆದುಕೊಂಡು ನಾಣು ಮುಂದೆ ನಡೆದ. ಚಿಕ್ಕ ಕೋಲು ಮತ್ತು ದುಂಡಗಿನ ಕಲ್ಲುಗಳನ್ನು ಹಿಡಿದುಕೊಂಡು ಹಿಂದಿನಿಂದ ಕುಟ್ಟ.

ಬರಲಿರುವ ವಿಪತ್ತುಗಳ ಬಗೆಗೆ ಅರಿವಿಲ್ಲದೆ ರೋಸಿಯೂ, ತಾಯಿಯೂ ಸೌದೆಕೊಟ್ಟಿಗೆಯಲ್ಲಿ ವಿರಮಿಸುತ್ತಿದ್ದರು. ಮಧ್ಯಾಹ್ನ ಸಮೃದ್ಧವಾದ ಡಿನ್ನರ್ ದೊರೆಯುವ ಅಪೂರ್ವವಾದ ಒಂದು ದಿನವದು. ಮನೆ ಯಜಮಾನರ ರೋಗಿಯಾದ ತಾಯಿ ಮಲಗುವ ಕೋಣೆಯಿಂದ ಹೊರಕ್ಕೆಸೆದ ಒಣಗಿದ ಬ್ರೆಡ್ಡಿನ ತುಣುಕುಗಳು, ಆರೆಂಜ್ ಸಿಪ್ಪೆಗಳು, ಎಂಜಲು ಎಲ್ಲಾ ಸೇರಿದಾಗ ಹೊಟ್ಟೆ ತುಂಬಿತು. ಅರ್ಧಕಣ್ಣು ಮುಚ್ಚಿಕೊಂಡು ಮಲಗಿದ್ದ ತಾಯಿಗೆ ಮಂಪರಾವರಿಸಿತ್ತು. ರೋಸಿ ಅಮ್ಮನ ದೇಹದಿಂದ